
# ನವಿಲುಗನ್ನಡಿ




ಜನವರಿ, 2018ರ 'ಪ್ರಬಂಧ ವಿಶೇಷ' ಸಂಚಿಕೆ ಮುಂದೆಯೂ ವಿಶೇಷವಾದುದ್ದನ್ನು ನಿರೀಕ್ಷಿಸುವಂತೆ ಮಾಡಿದೆ. 'ಮಾತು–ಕತೆ' ವಿನೂತನ ಪ್ರಯತ್ನ. ಕೇಶವರೆಡ್ಡಿ ಹಂದ್ರಾಳ ಅವರ 'ಶೋಧನೆ' ಕತೆ, ಕೆ.ವಿ. ತಿರುಮಲೇಶರ ಕವಿತೆಗಳು ಇಷ್ಟವಾದವು.

**ಬಿ.ಆರ್. ಅಣ್ಣಾಸಾಗರ, ಸೇಡಂ**

ವೀಣಾ ಶಾಂತೇಶ್ವರ ಮತ್ತು ಎಂ.ಎಸ್. ಆಶಾದೇವಿ ಅವರ 'ಮಾತು–ಕತೆ' ಉತ್ತಮವಾಗಿತ್ತು. ಇಂತಹ ಸಂವಾದಗಳು ಹೆಚ್ಚಲಿ.

**ದೊರೆಸ್ವಾಮಿ, ಮೈಸೂರು**

'ಮಾತು–ಕತೆ' ವಿಶೇಷವಾಗಿ ಗಮನ ಸೆಳೆಯಿತು. 'ಪಾನಲೋಕದ ಪ್ರಸಂಗಗಳು' ಪ್ರಬಂಧ, 'ಗಡಿಯೀಚೆಯ ಸದ್ದುಗಳು', 'ಚಿತ್ರಾನ್ನ' ಕತೆಗಳು ವಿಭಿನ್ನವಾಗಿದ್ದವು.

**ಶ್ರೀನಾಥ್ ಕೆ., ಹೊಸಪೇಟೆ**

'ಪ್ರಬಂಧ ವಿಶೇಷ'ದ ಪ್ರಬಂಧಗಳು ಕತೆಗಳಂತೆಯೇ ಚೆನ್ನಾಗಿವೆ. ರಹಮತ್ ತರೀಕೆರೆ ಅವರ 'ಪಾನಲೋಕದ ಪ್ರಸಂಗಗಳು' ಒಳ್ಳೆ ಕಿಕ್ ಕೊಡುವಂತಿದೆ. ಆದರೆ, ಇದೇ ಪ್ರಬಂಧ(ಪು.25)ದಲ್ಲಿ ಮುಖೇಶನ 'ಜಬ್ ದಿಲ್ಹೀ ಟೂಟ್ ಗಯಾ' ಎಂದಿದೆ. ಆ ಗೀತೆಯ ಗಾಯಕ ಕೆ.ಎಲ್. ಸೈಗಲ್, ಮುಖೇಶ್ ಅಲ್ಲ; 'ಷಹಜಹಾನ್' ಚಿತ್ರದಲ್ಲಿ.

**ಗುಬ್ಬಿ ರೇವಣಾರಾಧ್ಯ, ಬೆಂಗಳೂರು**

ಎಸ್.ಪಿ. ಶ್ಯಾನಭಾಗ ಅವರ 'ನಮ್ಮೊಳಗೊಬ್ಬ ಒಂಟಿ' ವಿಭಿನ್ನ ಕತೆ. 'ಪಾನಲೋಕದ ಪ್ರಸಂಗಗಳು' (ರಹಮತ್ ತರೀಕೆರೆ) ಒಂದಕ್ಷರ ಬಿಡದೇ ಓದುವಂತಹ ಪ್ರಬಂಧ. ರಹಮತ್ ಅವರ ಬರಹದ ರೀತಿಯೇ ಚೆನ್ನ.

**ನೀಲಮ್ಮ ಲಿಂಗಸೂರು, ರಾಯಚೂರು**

ಎಸ್.ಪಿ. ಶಾನಭಾಗ ಅವರ 'ನಮ್ಮೊಳಗೊಬ್ಬ ಒಂಟಿ' ಕತೆ ಬದುಕಿನ ವಿಭಿನ್ನ ಮುಖಗಳನ್ನು ಪರಿಚಯಿಸುತ್ತದೆ. 'ಗಡಿಯೀಚೆಯ ಸದ್ದುಗಳು' (ಬನವಾಸಿ ವೆಂಕಟೇಶ ದೀಕ್ಷಿತ್), 'ಚಿತ್ರಾನ್ನ' (ಗೋಪೀನಾಥ ರಾವ್) ಕತೆಗಳು ಹೃದಯಸ್ಪರ್ಶಿ.

**ಎನ್. ಮಹಾದೇವ, ಚೆನ್ನೈ**

'ಚಿಣ್ಣರ ಚಾವಡಿ'ಯಲ್ಲಿ ಪ್ರಕಟವಾದ ಕೆ. ನಿರುಪಮಾ ಅವರ 'ಫಲಾನುಭವಿ ಯಾರು' ಉತ್ತಮ ನೀತಿಕತೆ.

**ಕುಸುಮಾ, ಬೆಜ್ಜವಳ್ಳಿ**

'ನನ್ನ ಕಥಾಪ್ರಸಂಗ'ದಲ್ಲಿ ನಟರಾಜ್ ಹುಳಿಯಾರ್ ಅವರ ಬರಹದ ಬದುಕಿನ ಸ್ವಅನುಭವದ ನಿರೂಪಣೆ ಹೊಸ ಬರಹಗಾರರಿಗೆ ಮಾರ್ಗದರ್ಶಿ.

**ಸುಶೀಲಾ ಬಿ.ಆರ್. ರಾಮಣ್ಣ, ಬೆಂಗಳೂರು**

ಕೇಶವರೆಡ್ಡಿ ಹಂದ್ರಾಳರ 'ಶೋಧನೆ' ಕತೆ ಓದಿ ಸಂತಸ, ದುಗುಡ ಅನುಭವಿಸಿದೆ.

**ಮುಜೀಬ್ ಅಹ್ಮದ್, ಗುಂಡಿಕೆರೆ, ಕೊಡಗು**

ಗೋಪೀನಾಥ್ ರಾವ್ ಅವರ 'ಚಿತ್ರಾನ್ನ' ಕತೆ ಈ ಕಾಲದ ನೈಜ ಚಿತ್ರಣದಿಂದ ಗಮನ ಸೆಳೆಯಿತು.

**ಗಣೇಶ್ ಜನ್ನು, ಮುಂಬೈ**